# STUDIES
## IN THE
# SCRIPTURES

ನ್ಯಾಯದ ಪಥವು ಹೊಳೆಯುವ ಬೆಳಕಿನಂತೆ
ಹೆಚ್ಚು ಹೆಚ್ಚಾಗಿ ಪ್ರಜ್ವಲಿಸುತ್ತದೆ
ಆ ಪರಿಪೂರ್ಣ ದಿನದವರೆಗೆ

"The Path of the Just is as the Shining Light,
Which Shineth More and More
Unto the Perfect Day"

**ಸಂಪುಟ 5** SERIES V

# ದೇವರು ಮತ್ತು ಮನುಷ್ಯನ
## ನಡುವೆ
# ಪಾಪ ವಿಮೋಚನೆಯ ಸಂಧಾನ

# AT-ONE-MENT
## BETWEEN
# GOD AND MAN

(Kannada)

**"ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು." "ಇಷ್ಟು ಮಾತ್ರವೇ ಅಲ್ಲದೆ ನಾವು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಸಮಾಧಾನ ಸ್ಥಿತಿ ಹೊಂದಿದವರಾಗಿ ಆತನ ಮುಖಾಂತರ ದೇವರಲ್ಲಿ ಹರ್ಷಗೊಳ್ಳುತ್ತೇವೆ." – 1 ತಿಮೋಥಿ 2:5,6; ರೋಮಾಪುರ 5:11.**

# To the King of Kings and Lord of Lords

IN THE INTEREST OF
HIS CONSECRATED SAINTS,
WAITING FOR THE ADOPTION,

--AND OF--

"ALL THAT IN EVERY PLACE CALL UPON THE LORD,"
"THE HOUSEHOLD OF FAITH,"

--AND OF--

THE GROANING CREATION, TRAVAILING AND WAITING FOR THE MANIFESTATION OF THE SONS OF GOD,

## THIS WORK IS DEDICATED.

---

" To make all see what is the fellowship of the mystery which from the beginning of the world hath been hid in God." "Wherein He hath abounded toward us in all wisdom and prudence, having made known unto us the mystery of His will, according to His good pleasure which He hath purposed in Himself; that in the dispensation of the fulness of the times He might gather together in one all things, under Christ."
Eph. 3:4,5,9;1:8-10

---

Written in 1904 by Pastor Russell

# ಗ್ರಂಥಕರ್ತನ ಮುನ್ನುಡಿ

## THE AUTHOR'S FOREWORD

ಈ ಸಂಪುಟದ ಮೊದಲ ಮುದ್ರಣವು 1889ರಲ್ಲಾಯಿತು. ಪ್ರಪಂಚದಾದ್ಯಂತ ಇರುವ ಅಪಾರವಾದ ದೇವರ ಜನರ ಬಳಿ ಅನೇಕ ಭಾಷೆಗಳಲ್ಲಿ ಈ ಪುಸ್ತಕವು ಇದೆ. ಇದರ ಪುಟಗಳ ಮೂಲಕ ಬಹಳ ಬೆಳಕನ್ನು ಚೆಲ್ಲಿರುವ ಸತ್ಯವೇದದ ವಿವರಣೆಗಳಿಂದ ಬಹಳ ಉಪಯೋಗ ಪಡೆದಿದ್ದೇವೆ ಎಂದು ಅನೇಕರು ಪತ್ರದ ಮೂಲಕ ತಿಳಿಸಿದ್ದಾರೆ.

4ನೇ ಅಧ್ಯಾಯದ ಶೀರ್ಷಿಕೆಯಲ್ಲಿ "ನಿಷ್ಕಳಂಕಿತನು" ಎಂಬುದಾಗಿ ನಮ್ಮ ಕರ್ತನನ್ನು ಭೂಮಿಯಲ್ಲಿ ಬೆತ್ಲೆಹೇಮಿನ ಮಗುವಾಗಿದ್ದನು ಎಂಬುದು ಬಹಳ ಮಂದಿಯ ವಿಶೇಷ ಲಕ್ಷ್ಯಕ್ಕೆ ಬಂದಿದೆ ಹಾಗೂ ಹಲವರು ಅನೇಕ ವೇದದ ಮತ್ತು ವೈಜ್ಞಾನಿಕ ವಿಷಯದ ಬಗ್ಗೆ ಬೆಳಕು ಚೆಲ್ಲಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಪುಸ್ತಕದ ಮುಖ್ಯ ದೃಷ್ಠಿ ಈಡುಬಲಿ. ಹಾಗಾಗಿ ರಕ್ಷಣೆಗೆ ಸಂಬಂಧಪಟ್ಟ ಎಲ್ಲಾ ಬೋಧನೆಯನ್ನು ಇದು ಪ್ರಜ್ವಲಿಸುತ್ತದೆ. ಸತ್ಯವೇದ ವಿದ್ಯಾರ್ಥಿಗಳು ಈಡುಬಲಿ ಕೀಲಿಕೈಯಿಂದ ಸತ್ಯವೇದವನ್ನು ಪೂರ್ತಿಯಾಗಿ ಹೊರಗೆಡಹಬಹುದು ಎಂದು ಕಂಡುಕೊಂಡಿದ್ದಾರೆ – ಇದು ಸತ್ಯ ಯಾವುದು ಅಸತ್ಯ ಯಾವುದು ಎಂಬುದನ್ನು ನಿರ್ಧರಿಸುತ್ತದೆ.

ಈ ವಿಷಯವನ್ನು ಮೆಚ್ಚಿಕೊಳ್ಳುತ್ತಾ ಅಧ್ಯಯನ ಮಾಡುವಾಗ ಅದು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಾ ಹೋಗುವದರಲ್ಲಿ ಆಶ್ಚರ್ಯವೇನಿಲ್ಲ. ಈಡುಬಲಿಯ ಹೇಳಿಕೆಯಲ್ಲಿ ಸತ್ಯವೇದದ ಹೇಳಿಕೆಯು ಬದಲಾಗಿಲ್ಲ ನಮಗೆ ಅದರಲ್ಲಿರುವ ಭರವಸೆಯು ಬದಲಾಗಿಲ್ಲ. ಅದು ಇನ್ನೂ ಪ್ರಕಾಶಮಾನವಾಗಿರುವ ಪ್ರಯುಕ್ತ ಹೆಚ್ಚು ಸ್ಪಷ್ಟವಾಗಿದೆ. ವೇದದ ಹೇಳಿಕೆಯು ದೋಷರಹಿತವಾದದ್ದು (infalliable). ನಾವು ದೋಷಾತೀತರಲ್ಲದ ಕಾರಣ ನಮ್ಮ ಅಭಿಪ್ರಾಯವು ವಿಸ್ತಾರಗೊಳ್ಳಲು ನಾವು ವೇದವನ್ನು ಶೋಧಿಸುವಾಗ ಪವಿತ್ರಾತ್ಮದ ವಾಗ್ದಾನದ ಮೂಲಕ ಗ್ರಹಿಸಲು, ಮಾರ್ಗದರ್ಶನ ಹೊಂದಲು ಸಾಧ್ಯವಾಗಿದೆ. ದೇವರ ಯೋಜನೆಯು ಕ್ರಮಬದ್ಧವಾಗಿ ಬಿಚ್ಚಿಕೊಳ್ಳುತ್ತಿರುವಾಗ ನಾವು ನಿರ್ಲಕ್ಷ್ಯತೆ ತೋರದೆ ಹರ್ಷಿಸುವವರಾಗಿದ್ದೇವೆ. ಈಡುಬಲಿಯ ವಿಷಯವು ದಿವ್ಯವಾದ ಬೆಳಕಿನಲ್ಲಿ ವೈಭವವಾಗಿ ನೇಯುತ್ತಾ ಹೋಗುತ್ತದೆ.

ಆದಾಮನಿಗಾಗಿ ಹಾಗೂ ಆತನ ಸಂತತಿಗಾಗಿ ಈಡುಬಲಿಯ ಕಾರ್ಯನೆರವೇರಿಸಲು ನಮ್ಮ ಕರ್ತನಾದ ಯೇಸುವು ಪರಲೋಕದ ಮಹಿಮೆಯನ್ನು ಬಿಟ್ಟು ಬಂದನು. ಒಬ್ಬ ಪರಿಪೂರ್ಣ ಮನುಷ್ಯನಿಗೆ ಒಬ್ಬ ಪರಿಪೂರ್ಣ ಮನುಷ್ಯನು ಈಡುಬಲಿಯಾಗಲು – ಯುಕ್ತವಾದ ಬೆಲೆಯಾಗಲು ಯೇಸುವು ಆತ್ಮೀಕ ಶರೀರದಿಂದ ಮನುಷ್ಯನಾಗಿ ಮಾರ್ಪಟ್ಟನು. ನಾವು ನೋಡುವಂತೆ ಯೇಸುವು ತನ್ನ ಮೂವತ್ತನೆಯ ವಯಸ್ಸಿನಲ್ಲಿ ಯೋರ್ದಾನ್‌ನಲ್ಲಿ ಪ್ರತಿಷ್ಠೆಪಡಿಸಿಕೊಂಡು ತನ್ನ ಜೀವವನ್ನು ಅರ್ಪಿಸುತ್ತಾ ಬಂದನು. ಅದು ತಕ್ಕ ಸಮಯದಲ್ಲಿ ಆದಾಮನಿಗೂ ಆತನ ಸಂತತಿಗೂ ಸಲ್ಲುತ್ತದೆ. ಯೇಸುವು ತೆತ್ತ ಬೆಲೆಯನ್ನು ದೈವಿಕ ನ್ಯಾಯದ ಹಸ್ತಗಳಿಗೆ ಒಪ್ಪಿಸಿರುತ್ತಾನೆ. ನಮ್ಮ ಕರ್ತನು ಆತ್ಮೀಕ ಜೀವಿಯಾಗಿ ಎದ್ದು ಬಂದನು. ಅದು ಆತನು ದೇವರಿಗೆ ತೋರಿದ ನಿಷ್ಠೆಯ ಫಲವಾಗಿವೆ. "ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತವಾಗಿ ಏರಿಸಿ ಎಲ್ಲಾ ಹೆಸರುಗಳಿಗಿಂತ ಉನ್ನತವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ". ಯೇಸುವು ತನ್ನ ಈಡುಬಲಿಯ ಬೆಲೆಯನ್ನು ಭೂಮಿಯಲ್ಲಿರುವಾಗ ಉಪಯೋಗಿಸಲಿಲ್ಲ. ತನ್ನ ಶಿಷ್ಯರನ್ನು ಸಹ ದೇವರ ಸಾಂಗತ್ಯಕ್ಕೆ ತರಲಿಲ್ಲ. ಆತನು ಹೇಳಿದನು "ನಾನು ನನ್ನ ದೇವರ ಬಳಿಗೂ ನಿಮ್ಮ ದೇವರ ಬಳಿಗೂ ನನ್ನ ತಂದೆಯ ಬಳಿಗೂ ನಿಮ್ಮ ತಂದೆಯ ಬಳಿಗೂ ಹೋಗುತ್ತೇನೆ" ಮತ್ತು "ನಾನು ಹೋಗದ ಹೊರತೂ, ಪವಿತ್ರಾತ್ಮನು ನಿಮ್ಮ ಬಳಿಗೆ ಬರುವುದಿಲ್ಲ". ಕರ್ತನೂ ಏರಿ ಹೋದ ಹತ್ತು ದಿನಗಳ ನಂತರ ಆತನ ಹಿಂಬಾಲಕರಿಗೆ ಪಂಚಾಶತ್ತಮದ ಆಶೀರ್ವಾದವು ದೊರೆಯಿತು. ತಂದೆಯು ಕ್ರಿಸ್ತನ ಬಲಿದಾನದ ಅರ್ಹತೆಯನ್ನು ಸ್ವೀಕರಿಸಿದ್ದಾನೆಂಬುದಕ್ಕೆ ಇದೇ ರುಜುವಾತು. ಸಭೆಯು ಕ್ರಿಸ್ತನ ಎರಡನೆಯ ಬರೋಣದಲ್ಲಿ ಈಡುಬಲಿಯ ಅರ್ಹತೆಯನ್ನು ಘನಮಾನ ಮಹಿಮೆಯಾಗಿ ಪಡೆಯುವರು. ಈಡುಬಲಿಯ ಬೆಲೆಯು ಲೋಕಕ್ಕೆ ಪುನರ್‌ವಶದ ಕಾಲದಲ್ಲಿ ಕರ್ತನ ಎರಡನೆಯ ಬರುವಿಕೆಯಲ್ಲಿ ಆದಾಮನು

ಆತನ ಸಂತತಿಯವರೆಲ್ಲರೂ ಅವಿಧೇಯತೆಯಿಂದ ಕಳೆದುಕೊಂಡ ಭೂಮಿಯಲ್ಲಿ ಜೀವವನ್ನು ಮತ್ತು ಜೀವಿಸುವ ಹಕ್ಕನ್ನು ಪಡೆಯುವರು. ಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸುವರು. ಅವಿಧೇಯ ಜನಾಂಗವನ್ನು ದೇವರ ಸಾಂಗತ್ಯಕ್ಕೆ ಮತ್ತು ನಿತ್ಯಜೀವಕ್ಕೆ ತರುವನು – ಇಚ್ಛೆಯುಳ್ಳವರಿಗೆ ಮಾತ್ರ.

ಸಭೆಯ ಕರೆಯು ಹೆಚ್ಚಿನ ಬಲಿದಾನದ ಬೆಲೆಯನ್ನು ತರುವುದಾಗಿರಲಿಲ್ಲ. ಯೇಸುವು ಕೊಟ್ಟಿರುವುದಕ್ಕೆ ಏನೂ ಸೇರಿಸಬೇಕಿರಲಿಲ್ಲ. ಆತನದೇ ಸಾಕು. ಸಭೆಯ ಆಹ್ವಾನವು ಯೇಸುವಿನಲ್ಲಿ ಇದ್ದ ಆತ್ಮ, ಸ್ವಭಾವ – ದೇವರ ಚಿತ್ತವನ್ನು ನೆರವೇರಿಸುವಷ್ಟು – ಮರಣದವರೆಗೂ ಯಾರು ಅದನ್ನು ತೋರ್ಪಡಿಸಿದರೂ ಅವರು ರಾಜ ವಂಶಸ್ಥ ಯಾಜಕರ ಸದಸ್ಯರಾದರು. ಯೇಸುವು ಅವರ ಶಿರಸ್ಸಾಗಿಯು, ಮಹಿಮಾಯುತ ಪರಲೋಕದ ಮದಲಿಂಗನು. ಸಭೆಯು ಆತನ ಮದಲಗಿತ್ತಿ "ಯಜ್ಞದಿಂದ ನನ್ನ ಸಂಗಡ ಒಡಂಬಡಿಕೆ ಮಾಡಿದ ನನ್ನ ಪರಿಶುದ್ಧರನ್ನು ನನ್ನ ಬಳಿಗೆ ತನ್ನಿರಿ" (ಕೀರ್ತನೆ 50:5). ಮಿಲಿಯಾಂತರ ಯುಗದಲ್ಲಿ ಕ್ರಿಸ್ತನು ಮತ್ತು ಮದಲಗಿತ್ತಿಯು ಲೋಕವನ್ನು ಮೇಲೆತ್ತಲು ಆಳ್ವಿಕೆ ಮಾಡುವರು. ಲೋಕದ ಜನರನ್ನು ಪಾಪದಿಂದಲೂ ಮರಣದಿಂದಲೂ ಬಿಡಿಸುವರು.

ಕ್ರಿಸ್ತನ ಅರ್ಹತೆಯನ್ನು ಹೊರಿಸುವುದರ ಮೂಲಕ ಪುನರ್‌ವಶದ ಆಶೀರ್ವಾದವು ಎಲ್ಲಾ ಸಂತತಿಗೂ ದೊರಕುವದು. ನಮ್ಮ ಕರ್ತನು ನಮ್ಮ ವಿಮೋಚಕನು. ಮಹಾಯಾಜಕನಾಗಿ, ಮಧ್ಯಸ್ಥನಾಗಿ ದೇವರ ಯೋಜನೆಯ ಪ್ರಕಾರ ಪವಿತ್ರಾತ್ಮ ಹೊಂದಿದ ಸತ್ಯಸಭೆಯು ಆತ್ಮೀಕ ಕುಟುಂಬದ ಸದಸ್ಯರಾಗುವರು. ಕ್ರಿಸ್ತನೇ ಅದರ ತಲೆ. ಹಾಗಾಗಿ ಸಭೆಯು ಆತನೊಡನೆ ಸಹ–ಬಾಧ್ಯಸ್ಥರಾಗುವರು.

ಕರ್ತನಲ್ಲಿ ನಿಮ್ಮ ಸೇವಕ

**ಚಾರ್ಲ್ಸ್ ಟಿ. ರಸಲ್**

Brooklyn N.Y.
October 1, 1916

# ಕೃತಜ್ಞತೆಗಳು

ಸತ್ಯವೇದದಲ್ಲಿರುವ ಪ್ರವಾದನೆ ಮತ್ತು ಸತ್ಯಾಂಶಗಳನ್ನು ಅನೇಕ ವಿಮರ್ಶೆ ಮತ್ತು ವ್ಯಾಖ್ಯಾನಗಳೊಂದಿಗೆ ಭಾಷಾಂತರಿಸಲು ಪ್ರೇರೇಪಣೆಯನ್ನು ದಯಪಾಲಿಸಿದ ಮಹೋನ್ನತವಾದ ಯೆಹೋವ ದೇವರಿಗೂ ಮತ್ತು ನಮ್ಮೆಲ್ಲರ ಕರ್ತನೂ, ರಕ್ಷಕನೂ ಆದ ಯೇಸು ಕ್ರಿಸ್ತನಿಗೂ ಕೃತಜ್ಞತಾ ಸ್ತೋತ್ರಗಳು.

ಈ ಪುಸ್ತಕವು ಮೂಲತಃ ಆಂಗ್ಲ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು, ಸಹೋದರರಾದ ಪಾಸ್ಟರ್: ಚಾರ್ಲ್ಸ್ ಟಿ. ರಸಲ್‌ರವರು (Pastor Charles T. Russel) ಸತ್ಯವೇದ ಆಧಾರಿತ, ಪವಿತ್ರಾತ್ಮಪ್ರೇರಿತರಾಗಿ ಬರೆಯಲ್ಪಟ್ಟಿರುವ ಆರು ಸಂಪುಟಗಳಲ್ಲೊಂದಾದ "**ಪಾಪ ವಿಮೋಚನೆಗಾಗಿ ದೇವರು ಮತ್ತು ಮನುಷ್ಯನ ನಡುವೆ ಸಂಧಾನ**" ಎಂಬ ಐದನೇ ಸಂಪುಟದಿಂದ ಭಾಷಾಂತರಿಸಲಾಗಿದೆ. ಇದನ್ನು ಕನ್ನಡಕ್ಕೆ ಭಾಷಾಂತರಿಸಿದ ಸಹೋದರರಾದ ಅಸ್ವಾಲ್ಡ್ ಎಗ್ಬರ್ಟ್ ಅಮ್ಮಣ್ಣನವರಿಗೆ ಸತ್ಯವೇದ ವಿದ್ಯಾರ್ಥಿಗಳ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು. ಈ ಭಾಷಾಂತರವು ಕನ್ನಡವನ್ನು ಬಲ್ಲ ಎಲ್ಲಾ ಸಹೋದರ ಸಹೋದರಿಯರಿಗೆ ಒಂದು ವಿಶೇಷವಾದ ಕೊಡುಗೆಯಾಗಿದೆ. ದೇವರ ನಾಮಕ್ಕೆ ಅನಂತ ಅನಂತ ಸ್ತೋತ್ರವಾಗಲಿ.

ಕಡೆಯದಾಗಿ ಇದರ ಮುದ್ರಣಕ್ಕೆ ಮುಂಚೆ ಈ ಭಾಷಾಂತರವನ್ನು ಪರಿಷ್ಕರಿಸಿದ ಹಿರಿಯ ಸಹೋದರ-ಸಹೋದರಿ ಅವರುಗಳಿಗೂ, ಇದಕ್ಕಾಗಿ ಸಹಕರಿಸಿದ ಅನೇಕ ಸಹೋದರ-ಸಹೋದರಿಯರಿಗೂ ಮತ್ತು ಈ ಪುಸ್ತಕವನ್ನು ತಮ್ಮ ಕೆಲಸವೆಂದೇ ಪರಿಗಣಿಸಿ, ಶ್ರಮಿಸಿ ಅಂದವಾಗಿ ಮುದ್ರಿಸಿಕೊಟ್ಟ ಡಾನ್ ಪ್ರಿಂಟರ್ಸ್‌ರವರಿಗೂ (Dawn Printers) ನಮ್ಮ ಹೃದಯಪೂರ್ವಕ ವಂದನೆಗಳು.

ಕರ್ತನಲ್ಲಿ ಪ್ರಿಯ ಓದುಗರೇ, ಈ ಪುಸ್ತಕದ ಆಂಗ್ಲ ಶೀರ್ಷಿಕೆಯ ಕನ್ನಡ ಅನುವಾದದಲ್ಲಿ ಮೂರ್ನಾಲ್ಕು ರೀತಿಯಲ್ಲಿ ಅರ್ಥೈಸಬಹುದಾಗಿದೆ. ಉದಾ. "ದೇವರು ಮತ್ತು ಮನುಷ್ಯನ ಮಧ್ಯೆ ಪಾಪನಿವೃತ್ತಿಯ ಸಂಧಾನ" - "ಪಾಪ ಪರಿಹಾರಕ್ಕಾಗಿ ದೇವರು ಮತ್ತು ಮಾನವನ ನಡುವೆ ಸಂಧಾನ" - "ದೇವರು ಮತ್ತು ಮನುಷ್ಯನ ಮಧ್ಯೆ ಸಂಧಾನಪಡಿಸುವಿಕೆ (ಪಾಪ ನಿವೃತ್ತಿ)" - "ಪಾಪಪ್ರಾಯಶ್ಚಿತ್ತಕ್ಕಾಗಿ ದೇವರು ಮತ್ತು ಮನುಷ್ಯನ ನಡುವೆ ಸಂಧಾನ" - ಇತ್ಯಾದಿಯಾಗಿ ಕನ್ನಡ ಶೀರ್ಷಿಕೆಯಲ್ಲಿ ವ್ಯಾಖ್ಯಾಯನಿಸಬಹುದಾಗಿದೆ. ತಾವುಗಳು ಹಳೇಒಡಂಬಡಿಕೆ ಮಾದರಿಗೆ ಅನುಗುಣವಾಗಿ ಅನ್ವಯಿಸಿಕೊಳ್ಳಬಹುದು.

ಸರ್ವಶಕ್ತನಾದ ಯೆಹೋವ ದೇವರ ಆಶೀರ್ವಾದ
ಮತ್ತು
ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಕೃಪೆಯು ಈ ಪುಸ್ತಕವನ್ನು
ಓದುವವರೆಲ್ಲಗೊಂದಿಗಿದ್ದು ಆ ದೈವಜ್ಞಾನವನ್ನು ಹೊಂದಿಕೊಂಡು
ಆತ್ಮೀಕ ಅಭಿವೃದ್ಧಿ ಹೊಂದಿಕೊಳ್ಳಲಿ ಎಂದು ಹಾರೈಸುತ್ತೇವೆ.

## ಅಧ್ಯಯನ – 1

## ಪಾಪ ವಿಮೋಚನೆ

### ವಾಸ್ತವಾಂಶ ಮತ್ತು ತತ್ವಜ್ಞಾನ

### The Fact and Philosophy

ಸತ್ಯವೇದದ ದೃಷ್ಟಿಕೋನದಿಂದ ಇದು ಕ್ರೈಸ್ತ ಸಿದ್ಧಾಂತದ ಬುನಾದಿಯಲ್ಲಿ ಅಡಗಿದೆ – ಪ್ರಸ್ತಾಪದ ಮೂರು ದೃಷ್ಟಿಕೋನಗಳು – ಸಂಪ್ರದಾಯಬದ್ಧವಾದ ದೃಷ್ಟಿಕೋನ, – ಸಂಪ್ರದಾಯ ವಿರುದ್ಧವಾದ ದೃಷ್ಟಿಕೋನ; –ಇವೆರಡನ್ನೂ ಒಂದುಗೂಡಿಸಿ ಸಾಮರಸ್ಯವನ್ನುಂಟುಮಾಡುವ ಸತ್ಯವೇದದ ದೃಷ್ಟಿಕೋನ – ವಿಕಸನವಾದವು ಈ ಪ್ರಸ್ತಾಪದ ಸತ್ಯತೆಗೆ ಪ್ರತಿವರ್ತಿಸುತ್ತದೆ ಅಥವಾ ನಿಷ್ಪರಿಣಾಮಗೊಳಿಸುತ್ತದೆ – ದೈವಿಕ ನ್ಯಾಯದ ಸಂಧಾನವು ಯಶಸ್ವಿಯಾಗಿ ಪೂರೈಸಿದೆ – ಸಭೆಯ ಸಂಧಾನವು ಪ್ರಗತಿಯಲ್ಲಿದೆ – ಪ್ರಪಂಚದ ಭವಿಷ್ಯದ ರಾಜಿ ಸಂಧಾನ – ಮಧ್ಯಸ್ಥಿಕೆಯ ಸಿಂಹಾಸನವು ಮತ್ತು ದೇವರ ರಾಜ್ಯವು ತೆರವುಗೊಂಡಾಗ ಅಂತಿಮ ಫಲಿತಾಂಶಗಳು . .................. 1

## ಅಧ್ಯಯನ – 2

## ಪಾಪ ವಿಮೋಚನೆಯ ಕರ್ತೃ

### The Author of the Atonement

ಸರ್ವಶಕ್ತನಾದ ಯೆಹೋವನು – ಕ್ರಿಸ್ತನ ಮೂಲಕ ಪಾಪಿಗಳ ವಿಮೋಚಕನು – "ವಧಿತನಾದ ಕುರಿಯಾದಾತನು ಯೋಗ್ಯನು" – ಸ್ವಯಂ ಇರುವಂಥಾದ್ದು – 'ನಾನೇ ಆಗಿದ್ದೇನೆ' – ತಪ್ಪಾದ ಸಂಪ್ರದಾಯ – ಸುಳ್ಳು ಸೃಷ್ಟಿಯ ಮೇಲೆ ಆತುಕೊಂಡದ್ದು – ತಂದೆ ಮತ್ತು ಮಗನ ಅನ್ಯೋನ್ಯತೆಯನ್ನು ಪರಿಶುದ್ಧಗ್ರಂಥಗಳಲ್ಲಿ ತೋರಿಸಿಕೊಡುವುದು – ಪರಿಶುದ್ಧಗ್ರಂಥದಲ್ಲಿ 'ಯೆಹೋವ' ಮತ್ತು 'ಕರ್ತನು' ಎಂಬ ಶಿರೋನಾಮೆಯ ಬಳಕೆ – ಹಳೆ ಒಡಂಬಡಿಕೆಯಲ್ಲಿ ದೇವರು ಎಂಬ ಪದ – ಹೊಸ ಒಡಂಬಡಿಕೆಯಲ್ಲಿ – ಸಾಮರಸ್ಯಗೊಳಿಸುವ ಸತ್ಯವೇದದ ಸಾಕ್ಷಿ – 'ನನ್ನನ್ನು ನೋಡಿದವನು ನನ್ನ ತಂದೆಯನ್ನು ನೋಡಿದ್ದಾನೆ' – ಸರಿಸಮಾನನಾಗಿರುವೆನೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ. ನಮಗಾದರೋ ಒಬ್ಬನೇ ದೇವರು, ತಂದೆಯೆಂಬಾತನು, ಮತ್ತು ಒಬ್ಬನೇ ಕರ್ತನು ಯೇಸುಕ್ರಿಸ್ತನು. .................. 12

## ಅಧ್ಯಯನ – 3

## ಪಾಪ ಪರಿಹಾರದ ಮಹಾಯಾಜಕ

### ಪಡೆದಾತನಾದ ಏಕಮಾತ್ರನು

## The High Priest of the Atonement

### The Only Begotten One

ಆತನು ಯಾರು? ವಾಕ್ಯವು, ಒಬ್ಬ ದೇವರು – ಯೆಹೋವನು ಪಡಕೊಂಡ ಏಕಮಾತ್ರನು – ಸತ್ಯವೇದದ ಪುರಾವೆ – "ಐಶ್ವರ್ಯವಂತನಾಗಿದ್ದವನು" – "ಅಬ್ರಹಾಮನಿಗಿಂತಲೂ ಮೊದಲು ನಾನಿದ್ದೆನು" – ಆದಿಯೂ ಅಂತ್ಯವೂ – ಯೆಹೋವನು ಆದಿಯಲ್ಲಿ ನನ್ನನ್ನು ಪಡೆದುಕೊಂಡಿದ್ದನು – ವಾಕ್ಯವು ಮಾಂಸಧಾರಿಯಾದನು – ಮನುಷ್ಯಾವತಾರವಲ್ಲ – ಆತನು ತನ್ನನ್ನು ತಗ್ಗಿಸಿಕೊಂಡನು – "ಐಶ್ವರ್ಯವಂತನಾಗಿದ್ದವನು ನಮಗಾಗಿ ಬಡವನಾದನು" – ಈ ಸಾಕ್ಷಿಗಳಲ್ಲಿ ಯಾವುದೇ ಕಪಟತ್ವ ಇಲ್ಲ – ನಮ್ಮ ಕರ್ತನ ಗುಣನಡತೆಯು ವಂಚನೆಪಡಿಸುವುದಲ್ಲ – ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ............... 45

## ಅಧ್ಯಯನ – 4

## ಪಾಪ ವಿಮೋಚನೆಯ ಮಹಾಯಾಜಕ

### ನಿಷ್ಕಳಂಕನು

## The High Priest of The Atonement

### The Undefiled One

ಸಂಘರ್ಷಣೆಯುಳ್ಳವುಗಳಂತೆ ಕಂಡು ಬರುವ ಪರಿಶುದ್ಧ ಗ್ರಂಥ ಬರಹಗಳ ಒಂದುಗೂಡುವಿಕೆ – ಮರಿಯಳ ಪರಿಶುದ್ಧವಾದ ಗರ್ಭಧಾರಣೆ ಎಂಬ ರೋಮನ್ ಕೆಥೋಲಿಕರ ಸಿದ್ಧಾಂತವನ್ನು ಎತ್ತಿಹಿಡಿಯಲಾಗದು – ಕ್ರಿಸ್ತನ ಜನನವು ಪಾಪಿಗಳಿಗಿಂತ ವಿಭಿನ್ನವಾದುದು ಎಂಬುದು ದೈವಿಕ ವ್ಯವಸ್ಥೆಗೆ ಅಗತ್ಯವಾಗಿತ್ತು – ಇಲ್ಲವಾದಲ್ಲಿ ಈಡುಬಲಿಯ ಸಾಧ್ಯತೆ ಇದ್ದಿಲ್ಲ – ಜೀವ ಮತ್ತು ಜೀವ ದ್ರವ್ಯ (ಪ್ರೊಟೋಪ್ಲಾಸಮ್) ಇವುಗಳ ಪುನಃ ಕೂಡಿಸುವಿಕೆಯ ಇತ್ತೀಚಿನ ವೈಜ್ಞಾನಿಕ ವ್ಯವಕಲನ – ವಾಕ್ಯವು ಮಾಂಸಧಾರಿಯಾದುದು – ಇನ್ನೂ ನಿಷ್ಕಳಂಕಳಾದವಳಲ್ಲಿ ಜನ್ಮತಾಳಿದ್ದು – ಅಸಂಪೂರ್ಣಳಾದ ತಾಯಿಯೊಬ್ಬಳು ನಿಷ್ಕಳಂಕವಾದವನನ್ನು ಹೆರುವುದಾದರೂ ಹೇಗೆ? ಇದೇ ತತ್ವವು ಇತರ ದೈವಿಕ ಯೋಜನೆಗಳಲ್ಲಿಯೂ ಕಾರ್ಯವೆಸಗುತ್ತಿವೆ ಎಂಬುದಕ್ಕೆ ಪರಿಶುದ್ಧ ಗ್ರಂಥಗಳಲ್ಲಿ ಪುರಾವೆಗಳಿವೆ . .................. 54

## ಅಧ್ಯಯನ – 5

## ಪಾಪ ನಿವೃತ್ತಿಯ ಮಹಾಯಾಜಕ

### "ಆತನು ತನ್ನ ಸಹೋದರರಿಗೆ ಸಮಾನನಾಗಬೇಕಾಯಿತು" ಮತ್ತು "ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ"

## The High Priest of The Atonement

### "Made Like Unto His Brethern" and "Touched with a Feeling of our Infirmities"

ಆತನ ಸಹೋದರರು ಯಾರು? ಯಾವುದರಲ್ಲಿ ಹೋಲಿಕೆಯು ಒಳಗೊಂಡಿರುತ್ತದೆ? – ಆತನು ಯಾವ ರೀತಿಯಲ್ಲಿ ಎಲ್ಲಾ ಅಂಶಗಳಲ್ಲಿ ನಮ್ಮಂತೆ ಶೋಧನೆಗೆ ಗುರಿಯಾದನು, ಆದರೂ ಪಾಪಮಾಡಲಿಲ್ಲ? – ಅಡವಿಯಲ್ಲುಂಟಾದ ಶೋಧನೆಗಳು – ಅವುಗಳಿಗೂ ನಮ್ಮವುಗಳಿಗೂ ಇರುವ ಹೋಲಿಕೆ – ಸಾಧ್ಯವಾದರೆ ದೇವರಾದುಕೊಂಡವರನ್ನು ಸಹ ಮೋಸಗೊಳಿಸಬಲ್ಲರು – ಶ್ರಮೆಗಳ ಮೂಲಕವಾಗಿ ನಮ್ಮ ಕರ್ತನು ಯಾವ ಅರ್ಥದಲ್ಲಿ ಬಾಧೆಗಳ ಮೂಲಕ ಸಿದ್ಧಿಗೆ ತರುವುದು ಆತನಿಗೆ ಯುಕ್ತವಾಗಿತ್ತು ? – ಮಗನಾಗಿದ್ದರೂ ಆತನು ವಿಧೇಯತೆಯನ್ನು ಕಲಿತುಕೊಂಡನು – ಆತನನ್ನು ಯಾವ ರೀತಿಯಲ್ಲಿ ಪಾಪಮಯ ದೇಹವುಳ್ಳವುಳ್ಳವನನ್ನಾಗಿ ಮಾಡಲಾಯಿತು?, ಆದರೂ ಆತನು ಪಾಪ ಮಾಡಲಿಲ್ಲ – "ಆತನು ತಾನೇ ನಮ್ಮ ಬೇನೆಗಳನ್ನು ಹೊತ್ತುಕೊಂಡನು" – ಆತನು 'ಮನಮುಟ್ಟಿದವನು' ಆದುದು ಹೇಗೆ? . .................. 61

## ಅಧ್ಯಯನ – 6

## ಪಾಪ ಪ್ರಾಯಶ್ಚಿತ್ತದ ಮಹಾಯಾಜಕ

### ದಾವೀದನ ಮಗನು ಹಾಗೂ ದಾವೀದನ ಪ್ರಭುವು

## The High Priest of The Atonement

### David's Son and David's Lord

ದಾವೀದನ ಮಗನು ಹೇಗೆ? ಸೊಲೊಮೋನನ ಮೂಲಕವಾಗಿ ಯೋಸೇಫನ ವಂಶಾವಳಿ – ನಾತಾನನ ಮೂಲಕವಾಗಿ ಮರಿಯಳ ವಂಶಾವಳಿ – ಕೆಳಗಿನದನ್ನು ಮೇಲೆ ಮಾಡು; ಮೇಲಿನದನ್ನು ಕೆಳಗೆ ಮಾಡು – ಕ್ರಿಸ್ತನು ದಾವೀದನ ಕರ್ತನೆಂಬ ಬಿರುದನ್ನು ಪಡೆದದ್ದು ಯಾವಾಗ? – ಆತನು ಹೇಗೆ ದಾವೀದನ ಬುಡವೂ, ಕೊಂಬೆಯೂ ಆಗಿದ್ದಾನೆ? – 'ನಿತ್ಯನಾದ ತಂದೆ' ಎಂಬ ಆತನ ಬಿರುದಿನ ಅರ್ಥ – ಸುರಕ್ಷಿತವಾಗಿರುವುದು ಮತ್ತು ಅನ್ವಯವಾಗುವುದು ಹೇಗೆ? – ಕ್ರಿಸ್ತನ ಮಕ್ಕಳು ಯಾರು? – ಸಭೆಯು ಆತನ 'ಸಹೋದರ'ರು – ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರ ಮಕ್ಕಳು . .................. 76

## ಅಧ್ಯಯನ – 7

## ಪಾಪ ವಿಮೋಚನೆಯ ಮಹಾಯಾಜಕ ಮಧ್ಯಸ್ಥರು

### "ಮನುಷ್ಯ ಕುಮಾರನು"

## The High Priest of the Atonement

### "The Son of Man"

ಈ ಬಿರುದಿನ ಅರ್ಥ ಏನು ಅಲ್ಲ ? – ಇದರ ಅರ್ಥವೇನು ? – ಇದರ ಗೌರವಗಳು ನಿರ್ವಿವಾದವುಗಳು, ಅವುಗಳನ್ನು ಬೇರೆ ಯಾರೂ ಹಕ್ಕಿನಿಂದ ಪಡೆಯಲಾರರು – ಲೋಕವು ಕಂಡಂತೆ ದೇವಕುಮಾರ – ಪಿಲಾತನ ದೃಷ್ಟಿಕೋನ, ರೂಪ್‌ಸೋವ್‌ನ ದೃಷ್ಟಿಕೋನ, ನೆಪೋಲಿಯನ್ನನ ದೃಷ್ಟಿಕೋನ – "ಆತನಲ್ಲಿ ಯಾವ ಅಂದಚಂದಗಳೂ ಇರಲಿಲ್ಲ, ನಾವು ಅವನನ್ನು ನೋಡಿದಾಗ ನೋಡತಕ್ಕ ಯಾವ ಲಕ್ಷಣವೂ ಕಾಣಲಿಲ್ಲ" "ಅವನ ಮುಖವು . . . ವಿಕಾರವಾಗಿತ್ತು" " ಹತ್ತು ಸಾವಿರ ಜನರಲ್ಲಿ ಧ್ವಜಪ್ರಾಯನು" – "ಹೌದು, ಒಟ್ಟಾರೆಯಲ್ಲಿ ಆತನು ಸರ್ವಾಂಗದಲ್ಲಿಯೂ ಮನೋಹರನು" ಮುಂತಾದ ಹೇಳಿಕೆಗಳ ಮಹತ್ವ. .................. 89

## ಅಧ್ಯಯನ – 8

## ಪ್ರಾಯಶ್ಚಿತ್ತ ಯಜ್ಞದ ನಾಲೆ

### ದೇವರ ಪವಿತ್ರಾತ್ಮನು

## The Channel of the Atonement

### The Holy Spirit of God

ಪವಿತ್ರಾತ್ಮನ ಕಾರ್ಯಾಚರಣೆ – ಇಂದು ಮತ್ತು ಸಹಸ್ರ ವರ್ಷಗಳ ಕಾಲದಲ್ಲಿ – ಪವಿತ್ರಾತ್ಮನ ವಿವಿಧ ವಿವರಣಾ ನಾಮಗಳು : "ಪ್ರೀತಿಯ ಆತ್ಮ" " ಸತ್ಯದ ಆತ್ಮ" ಮುಂತಾದವುಗಳು – ಇದಕ್ಕೆ ವ್ಯತಿರಿಕ್ತವಾಗಿ ಅಶುದ್ಧ ಆತ್ಮ, "ಸುಳ್ಳಿನ ಆತ್ಮ" "ಅಂಜಿಕೆಯ ಆತ್ಮ" ಮುಂತಾದವುಗಳು –

ವೈಯುಕ್ತವಾದ ಸರ್ವನಾಮಗಳು ಅನ್ವಯಿಸಲಾಗಿದೆ – ‘ಆತ್ಮ’ ಎಂಬ ಪದದ ಮಹತ್ವ – “ದೇವರು ಆತ್ಮನಾಗಿದ್ದಾನೆ” – “ಪವಿತ್ರಾತ್ಮವು ಇನ್ನೂ ಕೊಡಲ್ಪಟ್ಟಿರಲಿಲ್ಲ” – ಆತ್ಮನ ವರಗಳು – ಪವಿತ್ರಾತ್ಮನ ರೂಪಾಂತರಗೊಳಿಸುವ ಶಕ್ತಿ – ಅಳತೆಯುಳ್ಳ ಆತ್ಮ, ಅಳತೆಯಿಲ್ಲದ ಆತ್ಮ – “ಪ್ರಾಪಂಚಿಕ” ಆತ್ಮ ಕ್ರಿಸ್ತ ವಿರೋಧಿ – ಇದಕ್ಕೂ ಪವಿತ್ರಾತ್ಮನಿಗೂ ಹೋರಾಟ – ಭಕ್ತ ಜನರಲ್ಲದ ಹಾಗೂ ಭಕ್ತ ಜನರ ಮಧ್ಯದಲ್ಲಿ ಕಾದಾಡುವ ಆತ್ಮ – ಮತ್ಸರದ ದುರಾಶೆಯುಳ್ಳ ಆತ್ಮ – ಆತ್ಮನ ಬೋಧನೆ – ಪರಾಕ್ಲೇಟೋಸ್ ಅಂದರೆ ಸಮಾಧಾನಪಡಿಸುವವರು – ಆತನು ನಿಮ್ಮನ್ನು ಸತ್ಯಕ್ಕೂ ಮತ್ತು ಸಂಪೂರ್ಣವಾದ ಪಾಪ ನಿವೃತ್ತಿಗೂ ನಡಿಸುವನು – ಅದ್ಭುತವಾದ ವರಗಳು ನಿಂತುಹೋದರೂ ಆತ್ಮನ ಮೇಲ್ವಿಚಾರಣೆಯು ನಿಂತಿಲ್ಲ, ಮುಂದುವರೆಯುತ್ತಿದೆ. .................. 98

## ಅಧ್ಯಯನ – 9

## ದೀಕ್ಷಾಸ್ನಾನವು ಪಾಪ ವಿಮೋಚನೆಯ ಆತ್ಮನ ಸಾಕ್ಷಿ ಮತ್ತು ಮುದ್ರೆಯಾಗಿದೆ

## The Baptism Witness and Seal of the Spirit of Atonement

ಆತ್ಮನ ದೀಕ್ಷಾಸ್ನಾನವು ಏಕಮಾತ್ರವಾಗಿದೆ – ಮೂರು ಭಾಗಗಳಲ್ಲಿ – ದೀಕ್ಷಾಸ್ನಾನದ ಮಹತ್ವ – “ಪರಲೋಕ ರಾಜ್ಯದ ಬೀಗದ ಕೈ” – ಎಲ್ಲಾ ದೇಹಗಳ ಮೇಲೆ ಆತ್ಮನ ಮತ್ತೊಂದು ದೀಕ್ಷಾಸ್ನಾನದ ವಾಗ್ದಾನವಿದೆ – ಅದರ ಮಹತ್ವ – ಆತ್ಮನಿಗಾಗಿ ಪ್ರಾರ್ಥನೆ – ಆತ್ಮನ ಸಾಕ್ಷಿ – ಅದರ ಪ್ರಾಮುಖ್ಯತೆ – ಅದಿಲ್ಲದೆ ದೇವರೊಂದಿಗೆ ಸಮಾಧಾನವಿಲ್ಲ – ಅದು ನಮ್ಮಲ್ಲಿ ಇದೆಯೋ ಇಲ್ಲವೋ ಯಾರಿಗೂ ತಿಳಿಯದು – “ಈ ಅಂಶವನ್ನು ತಿಳಿಯಬೇಕೆಂದು ನಾನು ಹಂಬಲಿಸುತ್ತೇನೆ” – ಆತ್ಮನ ಸಾಕ್ಷಿಯನ್ನು ಗ್ರಹಿಸುವುದು ಹೇಗೆ? – ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು – ಆತ್ಮನ ಸಾಕ್ಷ್ಯ – ಆತ್ಮನಿಂದ ಪವಿತ್ರ ಗೊಳ್ಳುವುದು – ಆತ್ಮನ ಮುದ್ರೆ – ಅದು ಮುದ್ರಿಸುವ ವಾಗ್ದಾನ – ವಿಮೋಚನೆಯ ದಿನದವರೆಗೆ – ಅತ್ಯುನ್ನತವಾದ ಪ್ರಾಪ್ತಿಯನ್ನು ಗಳಿಸುವುದು – ಮತ್ತು ಕಾಪಾಡಿಕೊಳ್ಳುವುದು. .................. 129

## ಅಧ್ಯಯನ – 10

## ಸ್ವಸ್ಥವಾದ ಮನಸ್ಸಿನ ಆತ್ಮ

## The Spirit of a Sound Mind

ಕರ್ತನ ಜನರಲ್ಲಿರುವ ಆತ್ಮನು ಹೆದರಿಕೆಯೆಂಬ ಆತ್ಮವನ್ನು ಹೊಡೆದೋಡಿಸುತ್ತದೆ – ಮಾನವ ಜಾತಿಯು ಸಾಮಾನ್ಯವಾಗಿ ಮಾನಸಿಕವಾಗಿಯೂ, ದೈಹಿಕವಾಗಿಯೂ ದೃಢವಾಗಿರುವುದಿಲ್ಲ – ಪವಿತ್ರಾತ್ಮನು ಯಾವ ಅರ್ಥದಲ್ಲಿ ದೃಢವಾದ ಮನಸ್ಸಿನ ಆತ್ಮನಾಗಿರುತ್ತಾನೆಂಬುದರ ತಿಳುವಳಿಕೆ – ಈ ಫಲಿತಾಂಶವನ್ನು ಉತ್ಪತ್ತಿಮಾಡುವ ಕಾರ್ಯಾಚರಣೆ – ದೃಢ ಮನಸ್ಸಿನ ನಿದರ್ಶನಗಳು. .................. 154

## ಅಧ್ಯಯನ – 11

## ಪಾಪ ವಿಮೋಚನೆಯ ಪವಿತ್ರಾತ್ಮ

### ಊಹಿತ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದು

## The Holy Spirit of At-one-ment

### Supposed Objections Considered

ಸಹಜವಾಗಿ ವಿರೋಧಾತ್ಮಕವಾದ ದೇವರ ವಾಕ್ಯಗಳನ್ನು ಪರೀಕ್ಷಿಸುವುದು – ಆತ್ಮನನ್ನು ನಂದಿಸ ಬೇಡಿರಿ – ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ – ಸತ್ಯದ ಆತ್ಮನು – ಸಮಾಧಾನದಾಯಕನು – ಪವಿತ್ರಾತ್ಮನಿಂದ ತುಂಬಿರುವುದು – ಪವಿತ್ರಾತ್ಮನಿಗೆ ಸುಳ್ಳುಹೇಳುವುದು – ಕರ್ತನ ಆತ್ಮನನ್ನು ಪ್ರೇರೇಪಿಸುವುದು – ಪವಿತ್ರಾತ್ಮನ ವಿರುದ್ಧವಾಗಿ ಪಾಪಮಾಡುವುದು – “ಆತ್ಮನು ಹೇಳಿದ್ದು” – ಅದು ಒಳ್ಳೆಯದೆಂದು ಪವಿತ್ರಾತ್ಮನಿಗೆ ಕಂಡುಬಂತು – “ಪವಿತ್ರಾತ್ಮನಿಗೆ ನಿಷಿದ್ಧವಾದುದು” – “ಪವಿತ್ರಾತ್ಮವು ಸಾಕ್ಷಿಹೇಳುತ್ತದೆ” – “ಪವಿತ್ರಾತ್ಮನು ನಿಮ್ಮನ್ನು ಮೇಲ್ವಿಚಾರಕರನ್ನಾಗಿ ಮಾಡುತ್ತದೆ – “ಕರ್ತನ ಆತ್ಮನನ್ನು ಪ್ರೇರೇಪಿಸುವುದು – ಪವಿತ್ರಾತ್ಮನು ಒರ್ವ ಬೋಧಕ – ಪವಿತ್ರನಾದವನಿಂದ ಉದ್ದೀಪನ – ಪವಿತ್ರಾತ್ಮನು ತಾನೇ ಮಾತಿಲ್ಲದಂತೆ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ – ಆತ್ಮವು ಯಾವ ರೀತಿಯಲ್ಲಿ ಈ ಲೋಕವನ್ನು ಆಕ್ಷೇಪಿಸುತ್ತದೆ – ನೀವೀಗ ಕ್ರಿಸ್ತ ವಿರೋಧಿಯ ಆತ್ಮನಿಂದ ದೇವರಾತ್ಮನನ್ನು ತಿಳಿದುಕೊಳ್ಳಿರಿ. .................. 163

## ಅಧ್ಯಯನ – 12

## ಪಾಪ ನಿವೃತ್ತಿಯ ಪ್ರಸ್ತಾಪ – ಮನುಷ್ಯ

## The Subject of Atonement Man

ಮಾನವನೆಂದರೇನು? – ಸಂಪ್ರದಾಯಬದ್ಧವಾದ ಉತ್ತರ – ವೈಜ್ಞಾನಿಕವಾದ ಉತ್ತರ – ಸತ್ಯವೇದದ ಉತ್ತರ – ಮಾನವನ ದೇಹ – ಮನುಷ್ಯನ ಆತ್ಮ – ಮಾನವತ್ವದ ಆತ್ಮ – ತಪ್ಪು ಭಾಷಾಂತರದಿಂದ ಉಂಟಾಗಿರುವ ಗೊಂದಲ – ಆತ್ಮಗಳ ವಿಸ್ತಾರ – ಮರಣ ಮತ್ತು ಪುನರುತ್ಥಾನಗಳ ನಡುವಿನ ಕಾಲದಲ್ಲಿ ಎಲ್ಲಾ ಆತ್ಮಗಳು ಹೋಗಲಿರುವ “ಶಿಯೋಲ್”, ’ಹೇಡ್ಸ್” ಎಂದರೆ ಯಾವುದು? – ಬೇರೆ ಬೇರೆಯಾಗಿ ಪರಿಗಣಿಸಬಹುದಾದ ದೇವರ ವಾಕ್ಯದ ಹೇಳಿಕೆಗಳು . .................. 188

## ಅಧ್ಯಯನ – 13

## ಪಾಪ ಪರಿಹಾರದ ಮೂಲಕ ಪಡಕೊಂಡ ನಿತ್ಯ ಜೀವ ಮತ್ತು ನಿರ್ಲಯತ್ವ ಇವುಗಳ ನಿರೀಕ್ಷೆ

## Hope for Life Everlasting and Immortality Secured by The Atonement

ಗೋಳಾಡುವ ಸೃಷ್ಟಿಗಳ ನಿಷ್ಠಾವಂತ ಅಪೇಕ್ಷೆಗಳು ಅಥವಾ ನಿರೀಕ್ಷೆಗಳು – ಸಾಕ್ಷ್ಯಗಳಲ್ಲ – ಪಾಪ ನಿವೃತ್ತಿಯ ವಾಗ್ದಾನಗಳು ಮತ್ತು ಶ್ರಮ ನಿರ್ವಹಣೆಯ ಸಾಕ್ಷಿಗಳು – ಭಿನ್ನತೆ ಮತ್ತು ವ್ಯತ್ಯಾಸ – ಮಾನವ ಆತ್ಮವು ನಿರ್ಲಯವಾದುದೋ? ಅಥವಾ ನಿರ್ಲಯತ್ವ ಹೊಂದುವ ನಿರೀಕ್ಷೆ ಅದಕ್ಕುಂಟೋ? – ದೇವದೂತರುಗಳು ನಿರ್ಲಯತ್ವ ಹೊಂದಿರುವರೋ? – ಸೈತಾನನು ನಿರ್ಲಯತ್ವವುಳ್ಳವನೋ? – ಸುವಾರ್ತೆಯ ಮೂಲಕ ಜೀವ ಮತ್ತು ನಿರ್ಲಯತ್ವಗಳು ಬೆಳಕಿಗೆ ಬಂದಿವೆ – ವೇದದಲ್ಲಿ ಗ್ರೀಕ್ ಪದವು ನಿರ್ಲಯ ಮತ್ತು ನಿರ್ಲಯತ್ವವಾಗಿ ತರ್ಜುಮೆಗೊಂಡಿದೆ – ಸಭೆಯ ನಿರೀಕ್ಷೆ ಮತ್ತು ರಕ್ಷಣೆ ಹೊಂದಿದ ಲೋಕದ ನಿರೀಕ್ಷೆ ಇವುಗಳು ಭಿನ್ನವಾಗಿದೆ. .................. 241

## ಅಧ್ಯಯನ – 14

## ಪಾಪ ಪರಿಹಾರದ ಅಗತ್ಯತೆ ಮತ್ತು ಶಾಪ

## The Necessity for the Atonement - The Curse

"ಶಾಪ"ವೆಂಬುದು ಪ್ರಸ್ತುತವಾದ ಕೇಡೇ ಹೊರತು ಭವಿಷ್ಯದ್ದಲ್ಲ – ಯಾಕೆ ಮತ್ತು ಎಲ್ಲಿ ಕೇಡು ಎಲ್ಲರ ಮೇಲೆ ಎರಗಿ ಬಂತು? – ಪಾಪದ ವಿರುದ್ಧವಾದ ದೇವರ ಈ ಕ್ರೋಧವು ಯಾವಾಗ ಮುಕ್ತಾಯಗೊಳ್ಳುತ್ತದೆ? – "ಪಾರಾಗುವುದು ಈಗ ಮತ್ತು ಭವಿಷ್ಯದಲ್ಲಿ" – ದೇವರು ಅನುಸರಿಸಿರುವ ಯೋಜನೆಗೆ ಅನುಸಾರವಾಗಿ ಪಾಪ ನಿವೃತ್ತಿಯು ಅವಶ್ಯ – ಮಾನವನು ದೇವದೂತರುಗಳಿಗೆ ಮತ್ತು ಮುಂಬರುವ ಸೃಷ್ಟಿಗಳಿಗೆ ಒಬ್ಬ ದೃಷ್ಟಾಂತವಾಗಿದ್ದಾನೆ . .................. 256

## ಅಧ್ಯಯನ – 15

## "ಎಲ್ಲರಿಗಾಗಿ ಈಡುಬಲಿ" – ಪಾಪ ವಿಮೋಚನೆಯ ಏಕೈಕ ತಳಹದಿ

## "A Ransom for All" - The only Basis for At-one-ment

ಈಡುಬಲಿ ಇಲ್ಲದೆ ಪಾಪನಿವೃತ್ತಿಯು ಅಸಾಧ್ಯ – ಹೊಂದಿಕೊಳ್ಳುವುದು ಆದರೆ ಒತ್ತಾಯಪೂರ್ವಕವಲ್ಲ – ಈಡುಬಲಿ ನೀಡುವವನಾಗಲು ಕೃಪಾಪಾತ್ರನಾಗಬೇಕು – ಈಡುಬಲಿ ಮತ್ತು ವಿಮೋಚನೆ ಇವುಗಳ ಮಹತ್ವ – ಮಾನವರಿಗಾಗಿ ನೀಡಲ್ಪಟ್ಟ ಈಡು ಯಾವುದು? – "ನಂಬಿಕೆಯಿಂದ ನೀತಿ ನಿರ್ಣಯ"ವು ಈ ರೀತಿಯಾಗಿ ಹೊಂದಿಕೊಳ್ಳಲಾಯಿತು – "ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು" – ಯಾರಿಂದ? ಯಾರಿಗಾಗಿ? ಯಾವ ಉದ್ದೇಶಕ್ಕಾಗಿ? – ಪ್ರೀತಿಯು ಯಾವ ರೀತಿಯಲ್ಲಿ ನ್ಯಾಯದೊಂದಿಗೆ ಸಹಕರಿಸಿತು? – "ಎಲ್ಲರಿಗಾಗಿ ಅರ್ಪಿಸಿದ ಈಡುಬಲಿಯನ್ನು ಹಿಂದಕ್ಕೆ ತೆಗೆದುಕೊಳ್ಳಲಿಲ್ಲ – ಮೊದಲನೆಯ ಆದಾಮನ ಪಿತೃತ್ವದ ಹಕ್ಕುಗಳನ್ನು ಎರಡನೆಯ ಆದಾಮನು ಕೊಂಡುಕೊಂಡನು – ಈಡುಬಲಿ ಕ್ಷಮಾಪಣೆಯಲ್ಲ – ಮಾನವನ ಮರಣವು ಈಡುಬಲಿಯಲ್ಲ – ಸರ್ವಮುಕ್ತಿವಾದಿಗಳ (universalists) ತತ್ವಗಳ ತಪ್ಪು ಆಲೋಚನೆಗಳು – ನ್ಯಾಯ ತೀರ್ಪು ಈಡುಬಲಿಯ ಕಾರಣ ಹಂಗು ಎನಿಸುವುದಿಲ್ಲ – ಆ ಏಕೈಕ ಹೆಸರು – ಮಧ್ಯಸ್ಥಗಾರನ ಪದ್ಧತಿಯು ಮೋಶೆಯಲ್ಲಿ ಛಾಯೆಯೂ ಕಂಡು ಬಂತು – ಈಡು ಬಲಿ, ಪರ್ಯಾಯವು – ಬೇರೊಂದು ಯೋಜನೆ ಸಾಧ್ಯವಿತ್ತೋ ? .................. 267

## ಅಧ್ಯಯನ – 16

## ಪುನಃ ಸಂಧಾನ ಅಥವಾ ಪಾಪ ವಿಮೋಚನಾ ಸೇವೆ

## The Ministry of Reconciliation or At-one-ment

ಈ ಸೇವೆಯು ರಾಜವಂಶಸ್ಥ ಯಾಜಕರಿಗೆ ಬದ್ಧವಾಗಿದೆ – ಪಾಪನಿವೃತ್ತಿಯ ಬಗ್ಗೆ ಬೋಧಿಸಲು ಪ್ರತಿಷ್ಠೆ ಹೊಂದಿರುವುದು – ಈ ಸಂತೋಷಭರಿತ ವಾರ್ತೆಯು ಯಾಕೆ ಮೆಚ್ಚಿಗೆಯಾಗುವುದಿಲ್ಲ? ಸೇವೆಯ ಫಲಗಳು – ಹಿಂಸೆ ಮತ್ತು ಮಹಿಮೆ – ಇವು ಯಾವರೀತಿಯಲ್ಲಿ ಸ್ವಾಮಿಭಕ್ತಿಯನ್ನು ಪರೀಕ್ಷಿಸುತ್ತವೆ? ನಂಬಿಗಸ್ತರು ಮಾತ್ರವೇ ಪಾಪ ನಿವೃತ್ತಿಯ ಭವಿಷ್ಯದ ಕಾರ್ಯದಲ್ಲಿ ಪಾಲುದಾರರಾಗುತ್ತಾರೆ ............ 311

* * * * * * * *

# <u>ನಮ್ಮ ನಂಬಿಕೆ</u> 

ನಾನು ಒಬ್ಬನೇ ಸತ್ಯದೇವರನ್ನು ನಂಬುತ್ತೇನೆ. ಆತನೊಬ್ಬನಿಗೇ **"ಯೆಹೋವ"** ಎಂದು ಹೆಸರು. ಆತನು ರಾಜಾಧಿರಾಜನೂ, ಕರ್ತರ ಕರ್ತನೂ, ತಾನೊಬ್ಬನೇ ಅಮರತ್ವವುಳ್ಳವನೂ, ಅಗಮ್ಯವಾದ ಬೆಳಕಿನಲ್ಲಿ ವಾಸ ಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ. ಯಾರೂ ಕಾಣಲಾರರು. ಆತನಿಗೆ ಮಾನವೂ, ನಿತ್ಯಾಧಿಪತ್ಯವೂ ಇರಲಿ, ಆಮೆನ್. [ಯೋಹಾನ 17:3; ಕೀರ್ತನೆ 83:18; 1ತಿಮೋಥಿ. 6:15, 16; ವಿಮೋ. 6:3; ಯೋಹಾನ 1:18; 1 ಕೊರಿಂಥ 8:5,6.]

ಯೆಹೋವ ದೇವರ ಒಬ್ಬನೇ ಮಗನೂ, ನಮ್ಮ ಕರ್ತನೂ, ರಕ್ಷಕನೂ ಆದ **"ಯೇಸುಕ್ರಿಸ್ತ"**ನನ್ನೂ ನಂಬುತ್ತೇನೆ.

ಈತನು ದೇವರ ಪ್ರತಿರೂಪನೂ, ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನೂ ಆಗಿದ್ದಾನೆ. ಯೆಹೋವನು ಯೇಸುಕ್ರಿಸ್ತನ ಮೂಲಕವಾಗಿ ಸಮಸ್ತವನ್ನೂ ಉಂಟುಮಾಡಿ ಯೇಸುಕ್ರಿಸ್ತನನ್ನು ಸಮಸ್ತಕ್ಕೂ ಭಾಧ್ಯಸ್ಥನನ್ನಾಗಿ ನೇಮಿಸಿರುವನು. ಸಮಸ್ತವೂ ಯೇಸುಕ್ರಿಸ್ತನಲ್ಲಿ ನೆಲೆಸಿರುವುದೆಂದು ನಂಬುತ್ತೇನೆ. [ಕೊಲೊಸ್ಸೆ. 1:15,16; ಎಫೆಸ. 1:2; ಯೋಹಾನ 3:16]

ಈತನು ದೇವಸ್ವರೂಪನಾಗಿದ್ದರೂ, ದೇವರಿಗೆ ಸರಿಸಮಾನನಾಗಿರುವನೆಂಬ ಅಮೂಲ್ಯ ಪದವಿಯನ್ನು (ಬಿಡಲೊಲ್ಲೆನು) ಕೊಳ್ಳೆ ಎಂದೆಣಿಸದೆ, ತನ್ನನ್ನು ಬರಿದು ಮಾಡಿಕೊಂಡು, ದಾಸನ ರೂಪವನ್ನು ಧರಿಸಿಕೊಂಡು, ಮನುಷ್ಯರಿಗೆ ಸದೃಷ್ಯನಾಗಿ, ಪಾಪಗಳಿಂದ ಮರಣವನ್ನು ಅನುಭವಿಸುತ್ತಿರುವ ಮಾನವರನ್ನು ರಕ್ಷಿಸುವುದಕ್ಕೋಸ್ಕರವಾಗಿ ತನ್ನನ್ನು ತಾನೇ ಬರಿದುಮಾಡಿಕೊಂಡು, ಎಲ್ಲರನ್ನೂ ಬಿಡಿಸಿಕೊಳ್ಳಲು ಮನುಷ್ಯನಾಗಿ, ಜೀವವನ್ನೇ ಕೊಟ್ಟು ದೇವರಿಗೂ ಮನುಷ್ಯರಿಗೂ ಸಮಾಧಾನವನ್ನುಂಟು ಮಾಡಿದನೆಂದು ನಂಬುತ್ತೇನೆ. [ ಯೋಹಾನ. 10:36; ಫಿಲಿ. 2:6,7; ಯೆಶಾಯ 53:4,5]

ಆದುದರಿಂದ ದೇವರು ಈತನನ್ನು ಸತ್ತವರೊಳಗಿಂದ ಎಬ್ಬಿಸಿ ತನ್ನ ಹಾಗೆಯೇ ಕುಮಾರನನ್ನೂ ಜೀವವುಳ್ಳವನಾಗಿರುವಂತೆ ಉಂಟುಮಾಡಿ, ಬೇರೆ ಎಲ್ಲಾದಕ್ಕೂ ಮೇಲಾದ ಜೀವ ಕೊಟ್ಟು, ತನ್ನ ಮಹಿಮೆಯಿಂದ ಬಲಗಡೆಯಲ್ಲಿ ಕುಳಿತುಕೊಳ್ಳುವಂತೆ ಮಾಡಿದನು ಎಂಬುದನ್ನು ನಂಬುತ್ತೇನೆ. [ಅ.ಕೃ. 3:15; ಯೋಹಾನ 5:26; ಫಿಲಿ. 2:9]

ಯೇಸುಕ್ರಿಸ್ತನೇ ದೇವರಿಗೂ ಮನುಷ್ಯರಿಗೂ ಮಧ್ಯಸ್ಥನಾಗಿಯೂ, ಸಭೆಯೆಂಬ ಶರೀರಕ್ಕೂ ಶಿರಸ್ಸಾಗಿಯೂ ಇದ್ದಾನೆ ಎಂಬುದನ್ನೂ ನಂಬುತ್ತೇನೆ. [1ತಿಮೋಥಿ. 2:5; ಎಫೆಸ 1:23; ಕೊಲೊಸ್ಸೆ. 1:18]

ಯೇಸುಕ್ರಿಸ್ತನು ಪರಲೋಕಕ್ಕೆ ಏರಿಹೋಗಿ ತಾನು ವಾಗ್ದಾನ ಮಾಡಿದ "ಪರಿಶುದ್ಧಾತ್ಮ" ಶಕ್ತಿಯನ್ನು ನಂಬಿಕೆಯುಳ್ಳ ತನ್ನ ಸಭೆಗೆ ಕೊಟ್ಟು , ದೈವಚಿತ್ತವನ್ನು ಅವರಿಗೆ ಪ್ರಕಟಿಸಿ, ಬಲಿಯ ಜೀವನದಲ್ಲಿ ಅವರನ್ನು ನಡೆಸಿಕೊಂಡು ಬರುತ್ತಿದ್ದಾನೆ ಎಂಬುದನ್ನೂ ನಂಬುತ್ತೇನೆ. [ಅ. ಕೃ. 1:11; ಲೂಕ 1:35, 24:49; ರೋಮಾಪುರ. 12:1]

ತಂದೆಯು ಹೇಳಿದ ಕಾಲದವರೆಗೆ ಸಭೆ ಬಲಿ ಎಂಬ ಮರಣಕ್ಕೆ ಒಳಪಟ್ಟು ಪ್ರಥಮ ಪುನರುತ್ಥಾನವನ್ನು ಹೊಂದುವ ತನ್ನ ಸಭೆಯಾದ ಸಕಲ ಪರಿಶುದ್ಧರಾದವರೊಡನೆ ಈ ಭೂಮಿಯನ್ನು ನೀತಿಗನುಸಾರ ನ್ಯಾಯವಿಚಾರಣೆ ಸಕಲ ದೊರೆತನವನ್ನೂ, ಅಧಿಕಾರವನ್ನೂ, ಶಕ್ತಿಯನ್ನೂ ಸರಿಪಡಿಸಿ, ಎಂದಿಗೂ ನಾಶವಾಗದ ತನ್ನ ನೀತಿಯುಳ್ಳ ಸಮಾಧಾನದ ರಾಜ್ಯವನ್ನು ಸ್ಥಾಪಿಸುವನೆಂದು ನಂಬುತ್ತೇನೆ. [ ಯೂದ 14,15; ಎಫೆಸ. 1:9; ಪ್ರಕಟನೆ 20:4,6; ದಾನಿ. 7:27; ಕೀರ್ತನೆ 72:2; 2 ಪೇತ್ರ 3:13; 1ಕೊರಿಂಥ 15:24]

ಮರಣ ಹೊಂದಿದ ಬೇರೆ ಎಲ್ಲಾ ಜನಾಂಗದವರೂ ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಅವರವರು ತಮ್ಮ ತಮ್ಮ ತರಗತಿಯಲ್ಲಿ ಜೀವಿತರಾಗಿ ಎದ್ದು ಕ್ರಿಸ್ತನು ತನ್ನ ಮರಣದಿಂದ ಸಂಪಾದಿಸಿದ ನಿತ್ಯಜೀವವನ್ನು ಹೊಂದಲು ಕ್ರಿಸ್ತನ ಮಾರ್ಗದಲ್ಲಿ ನಡೆದು ಪೂರ್ಣರಾಗುವರು. ಆದರೆ ಮನಃಪೂರ್ವಕವಾಗಿ ನಂಬದವರು ಎರಡನೆಯ ಮರಣದಲ್ಲಿ ನಾಶವಾಗುವರು ಎಂಬುದನ್ನೂ ನಂಬುತ್ತೇನೆ. [ಪ್ರಕ. 20:6,14,15; 1ಕೊರಿ. 15:23; ಯೋಹಾ. 5:28,29; ಯೆಶಾ. 2:2,4, 26:9; ಅ.ಕೃ. 3:23]

ಎಲ್ಲಾ ಶತ್ರುಗಳನ್ನೂ ಕ್ರಿಸ್ತನು ತನ್ನ ಪಾದಪೀಠವಾಗಿ ಮಾಡಿಕೊಳ್ಳುವ ತನಕ ಆಳ್ವಿಕೆ ಮಾಡಿ, ಕೊನೇ ಶತ್ರುವಾದ ಮರಣವನ್ನು ನಾಶಮಾಡಿ, ಸಮಸ್ತವನ್ನೂ (ಏದೇನಿನಲ್ಲಿ ಇದ್ದಂತೆ) ಸರಿಪಡಿಸಿ, ತಂದೆಯಾದ ಯೆಹೋವನಿಗೆ ರಾಜ್ಯವನ್ನು ಒಪ್ಪಿಸಿ ಯೆಹೋವನಿಗೆ ಕ್ರಿಸ್ತನೇ ಅಧೀನನಾಗುವನು. ಹೀಗೆ ದೇವರು ಸಮಸ್ತರಲ್ಲಿ ಸಮಸ್ತವೂ ಆಗುವನು ಎಂದು ನಂಬುತ್ತೇನೆ. ಆಮೆನ್. [1 ಕೊರಿಂಥ. 15:25–28; ಯೆಶಾಯ 11:3,9; 35ನೇ ಅಧ್ಯಾಯ, 65:17, ಪ್ರಕಟನೆ 21:24]

********